ಅ) ರಾಜೀವ್ ಗಾಂಧಿ ಕುಡಿಯುವ ನೀರಿನ ಯೋಜನೆಯಡಿ ಕಾರವಾರ ತಾಲ್ಲೂಕಿನ ಗೋಟಗಾಳಿ ಗ್ರಾಮದಿಂದ ಚಿತ್ತಾಕುಲಾ ಗ್ರಾಮದವರೆಗೆ ಮಂಜೂರಾದ ಯೋಜನೆ ತೀರಾ ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಕಾಮಗಾರಿ ಯಾವಾಗ ಮುಕ್ತಾಯವಾಗುವುದು? (ವಿವರ ನೀಡುವುದು)

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು):–

ಅ) ಕಾಮಗಾರಿಯು ನಿಗಧಿತ ಅವಧಿಯಲ್ಲಿ ಪೂರ್ಣಗೊಳ್ಳುವ ನಿಟ್ಟಿನಲ್ಲಿ ಪ್ರಗತಿಯಲ್ಲಿದೆ.

ಆ) ಈವರೆವಿಗೆ ರೂ. 400.00 ಲಕ್ಷ ಹಣ ಬಿಡುಗಡೆಯಾಗಿದ್ದು ರೂ. 234.00 ಲಕ್ಷ ವೆಚ್ಚವಾಗಿದೆ. ಯೋಜನೆಯ ಜಾಕ್‌ವೆಲ್ ಹಾಗೂ ಪೈಪ್‌ಲೈನ್ ಕೆಲಸ ಪ್ರಗತಿಯಲ್ಲಿದೆ. ನಿಗಧಿತ ಅವಧಿ ದಿನಾಂಕ : 15–06–2008 ರೊಳಗಾಗಿ ಯೋಜನೆಯನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

1042 (1108) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) :– ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸಾಗರ ತಾಲ್ಲೂಕಿನ ಅಂಬ್ಲಿಗೊಳ ಜಲಾಶಯದ ಯೋಜನೆಯಲ್ಲಿ ಜಮೀನು ಮುಳುಗಡೆ ಆದ ಸಂತ್ರಸ್ತರಲ್ಲಿ ಪರಿಹಾರ ಪಡೆದವರ ಸಂಖ್ಯೆ ಎಷ್ಟು ; (ಕುಟುಂಬವರು, ಗ್ರಾಮವಾರು ವಿವರ ನೀಡುವುದು) ;

ಆ) ಪರಿಹಾರ ಪಡೆಯದಿರುವವರ ಸಂಖ್ಯೆ ಎಷ್ಟು ? (ಗ್ರಾಮವಾರು, ಕುಟುಂಬವಾರು ವಿವರ ನೀಡುವುದು)

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):–

ಅ) ಮುಳುಗಡೆಯಾದ ಗ್ರಾಮಾವಾರು ಕುಟುಂಬಗಳ ವಿವರಗಳು ಕೆಳಕಂಡಂತಿದೆ.

ಗ್ರಾಮದ ಹೆಸರು	ಮುಳುಗಡೆಯಾದ ವಿಸ್ತೀರ್ಣ ಎಕರೆ–ಗುಂಟೆ	ಕುಟುಂಗಳ ಸಂಖ್ಯೆ
1. ಗೌತಮಪುರ	43–05	54
2. ಭೈರಾಪುರ	08–05	24
3. ನಾಡವಳ್ಳಿ	23–01	42
4. ಕುಡಿಗೇರಿ	07–21	14
ಒಟ್ಟು	81–32	134

ಮುಳುಗಡೆಗೆ ಒಳಪಟ್ಟ ಜಮೀನುಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, 4(1) ಅಧಿಸೂಚನೆ ಜಾರಿಗೊಳಿಸಲಾಗಿದೆ.

ಭೂಸ್ವಾಧೀನ ಅಂತಿಮ ತೀರ್ಗಡೆ ಅವಾರ್ಡ್ ಆಗದೇ ಇರುವುದರಿಂದ ಭೂ ಪರಿಹಾರ ಹಣವನ್ನು ಮುಳುಗಡೆಯಾದ ಜಮೀನಿನ ಭೂ ಮಾಲೀಕರಿಗೆ ಇನ್ನೂ ಪಾವತಿಸಿರುವುದಿಲ್ಲ.

ಆ) ಮೇಲೆ ವಿವರಿಸಿದಂತೆ ಮುಳುಗಡೆ ಸಂತ್ರಸ್ಥರಿಗೆ ಯಾವುದೇ ಭೂ ಪರಿಹಾರವನ್ನು ಇಲ್ಲಿಯವರೆಗೆ ಪಾವತಿಸಿರುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):–

1043(1259) ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ಮತ್ತು ಇವುಗಳ ಕಬ್ಬು ಅರೆಯುವ ಸಾಮರ್ಥ್ಯವೆಷ್ಟು (ಖಾಸಗಿ ಮತ್ತು ಸಹಕಾರಿ ಕಾರ್ಖಾನೆಗಳ ಹೆಸರು ವಿವರಗಳನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

(ಆ) ಪ್ರಸಕ್ತ ಸಾಲಿನ ಹಂಗಾಮಿನಲ್ಲಿ ಈ ಸಕ್ಕರೆ ಕಾರ್ಖಾನೆಗಳು ನುರಿಸಿರುವ ಕಬ್ಬಿನ ಪ್ರಮಾಣವೆಷ್ಟು; ಹಾಗೂ ಈ ಸಾಲಿನಲ್ಲಿ ಇಲ್ಲಿಯವರೆವಿಗೆ ಪ್ರತಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಉಳಿದಿರುವ ಕಬ್ಬಿನ ಪ್ರಮಾಣವೆಷ್ಟು;

(ಇ) ಈ ಕಾರ್ಖಾನೆಗಳು ಯಾವ ಯಾವ ದಿನಾಂಕಗಳಂದು ಈ ಹಂಗಾಮಿನಲ್ಲಿ ತಮ್ಮ ಕಬ್ಬು ನುರಿಸುವಿಕೆ ಕೆಲಸವನ್ನು ಮುಕ್ತಾಯಗೊಳಿಸಿವೆ;

(ಈ) ಬಹುತೇಕ ಕಾರ್ಖಾನೆಗಳು ಇಲ್ಲಿಯವರೆವಿಗೆ ಗರಿಷ್ಠ ಪ್ರಮಾಣದಲ್ಲಿ ಕಬ್ಬನ್ನು ನುರಿಸಿದ್ದರೂ ಸಹ ಜಿಲ್ಲಾಧಿಕಾರಿಗಳು ಕೆಲವು ಕಾರ್ಖಾನೆಗಳ ಕಬ್ಬನ್ನು ಮುರಿಸಿಲ್ಲವೆಂದು, ಈ ಕಾರ್ಖಾನೆಗಳ ವಿರುದ್ಧ ಸರ್ಕಾರಕ್ಕೆ ವರದಿ ಸಲ್ಲಿಸಿ ಇವುಗಳ ಆಡಳಿತ ಮಂಡಳಿಯನ್ನು ರದ್ದುಪಡಿಸುವಂತೆ ಸೂಚಿಸಿರುವುದು ನಿಜವೇ;

(ಉ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲಾಧಿಕಾರಿಗಳು ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ;